ಎ) ಸಮುದ್ರದ ಕೊರೆತಕ್ಕೆ ನದಿ ತಡೆಗೋಡೆ ಹೂಳು ಎತ್ತುವುದರ ಕುರಿತು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :— ಮಾನ್ಯ ಅಧ್ಯಕ್ಷರೇ, ಈ ಸಣ್ಣ ನೀರಾವರಿ ಇಲಾಖೆಯಿಂದ ಕೆಲವು ಕಾಮಗಾರಿಗಳು ಆಗದೇ ಹಣ ಪಾವತಿ ಮಾಡತಕ್ಕಂಥ ಕೆಲಸ ನಡೆಯುತ್ತಿದೆ. ಸಮುದ್ರದ ಕೊರೆತ, ನದಿ ತಡೆ ಗೋಡೆ, ಹೂಳು ಎತ್ತುವುದು, ಕಿಂಡಿ ಅಣೆಕಟ್ಟುಗಳನ್ನು ಮಾಡತಕ್ಕಂಥಾದ್ದು ಇಂತಹ ಕೆಲವು ಕಾಮಗಾರಿಗಳನ್ನು ಸಣ್ಣ ನೀರಾವರಿ ಇಲಾಖೆ ಮಾಡುತ್ತಿದೆ. ಆದರೆ ಸಮುದ್ರದ ಕೊರತೆಗೆ ಸಣ್ಣ ತಡೆಗೋಡೆಗಳನ್ನು ನಿರ್ಮಿಸುವಲ್ಲಿ ಸ್ಪ್ರಿಪ್ ವರ್ಕ್ ಎಂದು ಹೇಳುವಂತಾದ್ದು ಹಾಕಿರತಕ್ಕಂಥ ಕಲ್ಲುಗಳು ಮುಚ್ಚಿ ಹೋಗಿದೆ, ಕೊಚ್ಚಿ ಹೋಗಿದೆ ಎಂದು ಭಾವಿಸಬಹುದು. ಎನ್ನತಕ್ಕಂಥ ಆಧಾರದ ಹಿನ್ನೆಲೆಯಲ್ಲಿ ಅಂದಾಜು ಪಟ್ಟಿಯನ್ನು ತಯಾರು ಮಾಡಿ ಸರ್ಕಾರಕ್ಕೆ ಕಳುಹಿಸತಕ್ಕಂಥ ವ್ಯವಸ್ಥೆಯಾಗಿದೆ. ಇದರಿಂದ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ಆಗುತ್ತಿದೆ. ಇದರ ಬಗ್ಗೆ ವಿಚಾರವನ್ನು ನಾನು ಕಳೆದ ಬಾರಿ ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡಿದೆ. ಆದರ ಬಗ್ಗೆ ತನಿಖೆಯನ್ನು ಮಾಡಿಸುತ್ತೇವೆ ಎನ್ನತಕ್ಕಂಥ ಭರವಸೆ ಕೊಟ್ಟರು ಇದುವರೆಗೂ ತನಿಖೆ ಆಗಿಲ್ಲ. ಯಾವುದೇ ಅಧಿಕಾರಿಗಳ ವಿರುದ್ಧ ಕ್ರಮ ಆಗಿಲ್ಲ. ಎರಡನೆಯದು 50 ಸಾವಿರ ರೂಪಾಯಿಗಳ ಒಳಗಿನ ಕಾಮಗಾರಿಗಳನ್ನು ಟೆಂಡರ್ ಇಲ್ಲದೆ ಕೆಲಸವನ್ನು ಸ್ಥಳೀಯ ಅಧಿಕಾರಿಗಳು ಸ್ಥಳೀಯ ಕಛೇರಗಳಿಂದ ಮಾಡಿಸತಕ್ಕಂಥಾದ್ದು ಇತ್ತು. ಈ ಕೆಲಸಗಳು ಆಗದೇ ಬಿಲ್ಲುಗಳನ್ನು ಪಾವತಿಸಿದೆ ಎನ್ನತಕ್ಕಂಥ ವಿಚಾರವನ್ನು ಉಡುಪಿ ಜಿಲ್ಲಾ ಪಂಚಾಯತಿ ಸಭೆಯಲ್ಲಿ ನಿರ್ಣಯ ಮಾಡಿದೆವು ಇದರ ಬಗ್ಗೆ ಸಹ ತನಿಖೆ ಆಗಿಲ್ಲ. ಆ ನಂತರ ಕಳಪೆ ಮ್ಯಾಟನ್ನು ಉಪಯೋಗಿಸುತ್ತಿದ್ದೇವೆ ಎನ್ನತಕ್ಕಂಥ ಅಪಾದನೆಯನ್ನು ಮಾಡಿದ್ದೆ. ಇದರ ಬಗ್ಗೆ ಸಹ ತನಿಖೆ ಮಾಡಲಿಲ್ಲ. ಮತ್ತು ಕಿಂಡಿ ಅಣೆಕಟ್ಟಿಗೆ ಉಪಯೋಗಿಸತಕ್ಕಂಥಾ ಪೈಂಟ್ ಏನು ಇದೆ ಸುಮಾರು 400 ಪಟ್ಟು ದುಬಾರಿ. ಇದರ ಬಗ್ಗೆ ಸಹ ಅಪಾದನೆಯನ್ನು ಮಾಡಿದೆವು. ಇದರ ಬಗ್ಗೆ ಸಹ ತನಿಖೆ ಆಗಿದೆ. ಆದರೆ ವರದಿ ಆಗಿಲ್ಲ ಕ್ರಮ ಆಗಿಲ್ಲ. ಇದರ ಅರ್ಥ ಏನೆಂದರೆ ಇದಕ್ಕೆ ಸಂಬಂಧಪಟ್ಟಂತಹ ಸಚಿವರು ಯಾರಿದ್ದಾರೆ ಅವರು ನಿಷ್ಕ್ರಿಯರಾಗಿದ್ದಾರೆ. ಇಲ್ಲವಾದರೆ ಅವರು ಸಹ ಈ ಭ್ರಷ್ಟಾಚಾರದಲ್ಲಿ ಪಾಲುದಾರರಾಗಿದ್ದಾರೆ. ಎನ್ನತಕ್ಕಂಥ ಎರಡೇ ಮಾತನ್ನು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಅವರು ನಿಷ್ಕ್ರಿಯರಾಗಿರಬೇಕು. ಇಲ್ಲದಿದ್ದರೆ ಅವರೂ ಭ್ರಷ್ಟಾಚಾರದಲ್ಲಿ ಪಾಲುದಾರರಾಗಿರಬೇಕು. ನನಗೆ ಗೊತ್ತಿದೆ ತಾವು ಏನು ಉತ್ತರ ಕೊಡುತ್ತೀರಿ ಎಂದು ವರದಿ ತರಿಸುತ್ತೇನೆ, ಪರಿಶೀಲಿಸುತ್ತೇನೆ, ಕ್ರಮ ಕೈಗೊಳ್ಳುತ್ತೇನೆಂದು. ಈ ಉತ್ತರದಿಂದ ಆಗುವುದಿಲ್ಲ. ನಾನು ಮಾಡಿರತಕ್ಕಂಥಾ ಅಪಾದನೆ ಸತ್ಯವಾದಲ್ಲಿ ತಾವು ಏನು ಕ್ರಮ ಕೈಗೊಳ್ಳುತ್ತೀರಿ? ಒಂದು ವೇಳೆ ಇದಕ್ಕೆ ತಾವು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಜವಾಬ್ದಾರಿ ಇರಬೇಕು. ನೀವೂ ಸಹ ಈ ಬಗ್ಗೆ ಹಾರಿಕೆ ಉತ್ತರ ಕೊಟ್ಟರೆ ನೀವೂ ಸಹ ಈ ಅಪಾದನೆಗಳಿಂದ ಮುಕ್ತರಾಗುವುದಿಲ್ಲ. ಮಾನ್ಯ ಅಧ್ಯಕ್ಷಣೆಯವರೇ, ಹಿಂದೆ ದೇವರನ್ನು ಅನುಗ್ರಹಿಸಬೇಕಾದರೆ ಯಾಗ, ಯಜ್ಞ, ಹೋಮ, ಜಪ ತಪ ಎಲ್ಲಾ ಮಾಡಬೇಕಂತೆ ಈಗ ಮಾನ್ಯ ಮಂತ್ರಿಗಳಿಂದ ಏನಾದರೂ ಸಿದ್ಧಿ ಮಾಡಿಕೊಳ್ಳಬೇಕಾದರೆ ಅಥವಾ ಏನಾದರೂ ತನಿಖೆ ಮಾಡಿಸಿಕೊಳ್ಳಬೇಕಾದರೆ ನಾವು ಏನು ಮಾಡಬೇಕು ಎನ್ನತಕ್ಕಂಥಾದ್ದನ್ನು ಅವರು ಹೇಳಬೇಕು.

ಶ್ರೀ ಎಂ.ಎಸ್. ಪಾಟೀಲ್ (ಸಹಕಾರಿ ಸಚಿವರು) :— ಮಾನ್ಯ ಅಧ್ಯಕ್ಷರೇ, ನೇರವಾಗಿ ಮಂತ್ರಿಗಳ ಮೇಲೆ ಆಪಾದನೆ ಮಾಡಿದ್ದಾರೆ. ನೀವೂ ಭಾಗಿಗಳಾಗಿದ್ದೀರಿ ಎಂದು ತಮಗೆ ಏನಾದರೂ ಆಧಾರ ಇದ್ದರೆ ತಾವು ಹೇಳಿದರೆ ಒಳ್ಳೆಯದು

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :— ನಾನು ಏನು ಹೇಳಿದೆ ಅಂದರೆ ಮಂತ್ರಿಗಳು ಒಂದು ನಿಷ್ಠೆಯರಾಗಿರಬೇಕು ಇಲ್ಲದಿದ್ದರೆ ಯಾವ ಮಂತ್ರಿಗಳು ಇದರಲ್ಲಿ ಇದ್ದಾರೆ, ಅವರೂ ಸಹ ಭ್ರಷ್ಟಾಚಾರದಲ್ಲಿ ಪಾಲುದಾರರಾಗಿರಬೇಕು.

ಶ್ರೀ ಎಂ.ಎಸ್. ಪಾಟೀಲ್ :— ಅದಕ್ಕೆ ಏನಾದರೂ ಆಧಾರಗಳು ಇದ್ದರೆ ಕೊಡಿ, ಸುಮ್ಮನೆ ಆಪಾದನೆ ಮಾಡುವುದು ಸರಿಯಲ್ಲ. ಆಪಾದನೆ ಮಾಡುವಾಗ ಜವಾಬ್ದಾರಿಯುತವಾಗಿ ಮಾಡಬೇಕಾಗುತ್ತೆ. ಈಗ ಅವರು ಕೆಲವು ಆಪಾದನೆಗಳನ್ನು ಮಾಡಿದ್ದಾರೆ. ಖಂಡಿತವಾಗಿ ಯಾರ್ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಉಗ್ರವಾದ ಕ್ರಮ ಕೈಗೊಳ್ಳುತ್ತೇವೆ.

6.10 ಪಿ.ಎಂ.

ಎ) ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿಗೆ ಚುನಾವಣೆ.

+ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್) :— ಮಾನ್ಯ ಛೇರ್ಮನ್‌ರವರೇ, ಮೊನ್ನೆ ಮಾರಾಟ ಮಹಾ ಮಂಡಲದಲ್ಲಿ 14ನೇ ತಾರೀಖು ನಿರ್ದೇಶಕರ ಚುನಾವಣೆ ಇತ್ತು. 14 ನೇ ತಾರೀಖು ಚುನಾವಣೆ ಇದ್ದರೆ 13ನೇ ತಾರೀಖು ಚುನಾವಣಾ ಪಟ್ಟಿ ತಯಾರಾಗುತ್ತದೆ. ಮೊದಲು ಮಾಡಿದ ಪಟ್ಟಿಯೇ ಬೇರೆ. 13ನೇ ತಾರೀಖು ಮಾಡಿದ ಪಟ್ಟಿಯಿಂದಾಗಿ ಹೆಚ್ಚಾದ 200 ರಷ್ಟು ಜನ ಬೇರೆ ಕಡೆಯಿಂದ ಬಂದು ಓಟು ಹೇಗೆ ಹಾಕಬೇಕು? 14ನೇ ತಾರೀಖು ಓಟು ಆಯಿತು. ತಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ ವ್ಯವಸ್ಥಿತವಾಗಿ ಚುನಾವಣೆ ಆಯಿತು. ಈಗ ಹಾಲಿ ಇದ್ದಂತಹ ಅಧ್ಯಕ್ಷರು, ಜನರಲ್ ಮ್ಯಾನೇಜರ್ ಮತ್ತು ಷಣ್ಮುಗಪ್ಪ ಎಂಬ ನಿರ್ದೇಶಕರು ಸೇರಿಕೊಂಡು ಮನಸ್ಸಿಗೆ ಬಂದಂತೆ ಅಮೆಂಡ್‌ಮೆಂಡ್ ಮಾಡಿಕೊಂಡಿದ್ದಾರೆ. ಒಂದೇ ವರ್ಷದಲ್ಲಿ ಮೂರು ಜನರಲ್ ಬಾಡಿ ಮೀಟಿಂಗ್‌ಗಳಾಗಿವೆ. ತಮಗೆ ಬೇಕಾದಂತೆ ಅಮೆಂಡ್‌ಮೆಂಟ್ ಮಾಡಿಕೊಂಡು ಕಳೆದ 12 ವರ್ಷಗಳಿಂದ ಚುನಾವಣೆ ಅಲ್ಲಿ ಆಗಿಲ್ಲ. ನಾನು 35 ವರ್ಷಗಳಿಂದ ಅಲ್ಲಿ ಡೈರೆಕ್ಟರ್ ಆಗಿದ್ದೇನೆ. ಅದಕ್ಕಾಗಿ ನಾನು ಈ ಮಾತನ್ನು ಇಲ್ಲಿ ಹೇಳುತ್ತಿದ್ದೇನೆ. ನನಗೆ ಒಂದು ರೀತಿಯಿಂದ ಅಸಮಾಧಾನವಾಗುತ್ತಿದೆ. ಇವತ್ತು ಆ ಮಹಾ ಮಂಡಲಿ ಮಾರಾಟಕ್ಕೆ ಹೋಗತಕ್ಕಂಥ ಪರಿಸ್ಥಿತಿ ಇದೆ. 22 ಕೋಟಿ ರೂಪಾಯಿಗಳ ನಷ್ಟವನ್ನು ಅದು ಅನುಭವಿಸಿದೆ. ಇವತ್ತು ಅದರ ಪರಿಸ್ಥಿತಿ ಅಲ್ಲಿಯ ನೌಕರರಿಗೆ ಸಂಬಳ ಕೊಡಲಾಗದಂತೆ ಇದೆ. ಅಪೆಕ್ಸ್ ಬ್ಯಾಂಕ್‌ನಲ್ಲಿ ಮಂಡಲಿಯ ಬಿಲ್ಡಿಂಗ್ ಒಂದನ್ನು ಅಡವು ಇಟ್ಟಿದ್ದಾರೆ. ಇನ್ನೊಂದು ಬಿಲ್ಡಿಂಗ್ ಅನ್ನು ಅಡವು ಇಡಲು ರೆಡಿ ಆಗಿದ್ದಾರೆ. ಇನ್ನೊಂದು ಸ್ವಲ್ಪ ದಿವಸವಾದರೆ ಅಲ್ಲಿರತಕ್ಕಂಥ